# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೊರಮಾವು ಉಪ ವಿಭಾಗ,**

**ಮಹದೇವಪುರ ವಲಯ, ಬೆಂಂಗಳೂರು – 560 113.**

ಸಂಖ್ಯೆ:ಸ.ಅ/ರಾ.ಮೂ.ನ/ಪಿ.ಆರ್/ /2021-22 ದಿನಾಂಕ:- 05/01/2022

## "ಸಭಾ ಸೂಚನಾ ಪತ್ರ"

ವಿಷಯ:- ವಾರ್ಡ್ ನಂ-51 ರ ವಿಜಿನಾಪುರ ವಾರ್ಡ್ ಕಮಿಟಿ ಅಧ್ಯಕ್ಷರು ರವರ ಅಧ್ಯಕ್ಷತೆಯಲ್ಲಿ ದಿನಾಂಕ:- 07/01/2022 ಶುಕ್ರವಾರ ಬೆಳಗ್ಗೆ 11.30 ಗಂಟೆಗೆ ವಾರ್ಡ್ ಸಮಿತಿಯ ಸದಸ್ಯರುಗಳಿಗೆ ಸಭೆ ಕರೆದಿರುವ ಬಗ್ಗೆ.

* * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ವಿಜಿನಾಪುರ ವಾರ್ಡ್ ನಂ-51 ರ ಕಾರ್ಯದರ್ಶಿ ಮತ್ತು ಸಂಚಾಲಕರು ರವರ ಸಮ್ಮುಖದಲ್ಲಿ ವಾರ್ಡ್ ನಂ-51 ಕ್ಕೆ ಸಂಬಂಧಿಸಿದಂತೆ ವಾರ್ಡ್ ಸಮಿತಿಯ ಸದಸ್ಯರುಗಳಿಗೆ ವಿಜಿನಾಪುರ ವಾರ್ಡ್ ಕಛೇರಿಯಲ್ಲಿ ಸಭೆ ಕರೆಯಲಾಗಿದ್ದು, ತಾವುಗಳು ಮೇಲ್ಕಂಡ ದಿನಾಂಕದಂದು ತಪ್ಪದೇ ಸಭೆಗೆ ಹಾಜರಾಗಲು ಈ ಮೂಲಕ ತಮ್ಮಲ್ಲಿ ಕೋರಲಾಗಿದೆ.

**ವಿಶೇಷ ಸೂಚನೆ:-** Covid 19 ಇರುವುದರಿಂದ ಎಲ್ಲಾರು ಕಡ್ಡಾಯವಾಗಿ ಸ್ಯಾನಿಟೈಜರ್ ಬಳಸಿ, ಮಾಸ್ಕ ಧರಿಸಬೇಕು ಮತ್ತು ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು.

Kmagal Manje

**ಕಾರ್ಯದರ್ಶಿಗಳು ಮತ್ತು ಸಂಚಾಲಕರು ಹಾಗೂ**
**ಸಹಾಯಕ ಅಭಿಯಂತರರು ವಿಜಿನಾಪುರ ವಾರ್ಡ್**
**ಸಂಖ್ಯೆ-51.**

**ರವರಿಗೆ,**

**ಪ್ರತಿಯನ್ನು:-**

1) ಮಾನ್ಯ ಜಂಟಿ ಆಯುಕ್ತರು ಮಹದೇವಪುರ ವಲಯರವರ ರವರ ಘನ ಮಾಹಿತಿಗಾಗಿ.
2) ಮಾನ್ಯ ಮುಖ್ಯ ಅಭಿಯಂತರರು ಮಹದೇವಪುರ ವಲಯರವರ ರವರ ಘನ ಮಾಹಿತಿಗಾಗಿ.
3) ಕಾರ್ಯಪಾಲಕ ಅಭಿಯಂತರರು ಕೆ.ಆರ್.ಪುರ ವಿಭಾಗರವರ ಘನ ಮಾಹಿತಿಗಾಗಿ.
4) ಸಹಾಯಕ ಕಾರ್ಯಪಾಲಕ ಅಭಿಯಂತರರು ಹೊರಮಾವು ಉಪ ವಿಭಾಗ ರವರ ಘನ ಮಾಹಿತಿಗಾಗಿ.
5) ರಸ್ತೆ ಮೂಲಭೂತ ಸೌಕರ್ಯ ವಿಭಾಗ, ಕೇಂದ್ರ ಕಛೇರಿ ಅನೆಕ್ಷರ್ ಕಟ್ಟಡ, ರವರ ಘನ ಮಾಹಿತಿಗಾಗಿ.
6) ಬಿ.ಡಬ್ಲ್ಯೂ.ಎಸ್.ಎಸ್.ಬಿ, ಐ.ಟಿ.ಐ ಸರ್ಕಲ್, ದೂರವಾಣಿ ನಗರ ಅಂಚೆ, ಬೆಂಗಳೂರು-16 ರವರ ಮಾಹಿತಿಗಾಗಿ.
7) ರಾಜಕಾಲುವೆ ವಿಭಾಗ ಕಛೇರಿ, ನೃಪತುಂಗ ಸರ್ಕಲ್, ಬೆಂಗಳೂರು.
8) ಸಹಾಯಕ ಕಾರ್ಯಪಾಲಕ ಅಭಿಯಂತರರು, ಇ-10 ಉಪ-ವಿಭಾಗ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ರಾಮಮೂರ್ತಿನಗರ, ಬೆಂಗಳೂರು.
9) ಪಶುಸಂಗೋಪನೆ ಇಲಾಖೆ, ಕೃಷ್ಣರಾಜಪುರ ರವರ ಮಾಹಿತಿಗಾಗಿ.
10) ಕಛೇರಿ ಪ್ರತಿ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ, ಹೊರಮಾವು ಗ್ರಾಮ, ಬೆಂಗಳೂರು– 560113

ಸಂಖ್ಯೆ.ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/ /2021–22 ದಿನಾಂಕ: 07.01.2022

**ದಿನಾಂಕ–07.01.2022 ರಂದು ನಡೆದಿರುವ ವಿಜಿನಾಪುರ ವಾರ್ಡ್ ಸಂಖ್ಯೆ–51 ರ ವಾರ್ಡ್ ಸಮಿತಿ ಸಭೆ ನಡುವಳಿಗಳು**

| ಸದಸ್ಯರ ಹೆಸರು ಮತ್ತು ಪದನಾಮ | | ಸದಸ್ಯರ ಹಾಜರು/ಗೈರು ಹಾಜರು |
|---|---|---|
| 1 | ಶ್ರೀಮತಿ.ತ್ರಿವೇಣಿ (ಅಧ್ಯಕ್ಷರು) | ಹಾಜರು |
| 2 | ಶ್ರೀ.ಕೆ.ನಾಗಭೂಷಣ, ಸಹಾಯಕ ಅಭಿಯಂತರರು (ವಾರ್ಡ್ ನಂ.51) (ಕಾರ್ಯದರ್ಶಿ) | ಹಾಜರು |
| 3 | ಶ್ರೀ.ರಾಜಣ್ಣ (ಹಿ.ಆ.ಪ) ವಾರ್ಡ್ ನಂ.51 | ಹಾಜರು |
| 4 | ಶ್ರೀ.ಮಧು (ಕಿ.ಆ.ಪ) ವಾರ್ಡ್ ನಂ.51 | ಹಾಜರು |
| 5 | ಶ್ರೀ.ಮಂಜುನಾಥ ಬಡಿಗೇರ್ (ಕಂದಾಯ ಪರಿವೀಕ್ಷಕರು) | ಹಾಜರು |
| 6 | ಶ್ರೀ.ಮಹೇಂದ್ರ ಕುಮಾರ್ (ಸಲಹೆಗಾರರು, ಕಂದಾಯ ಇಲಾಖೆ ) | ಹಾಜರು |
| 7 | ಶ್ರೀ.ನಾಗರಾಜ್, ಕೆಲಸ ಪರಿವೀಕ್ಷಕರು ವಾರ್ಡ್ ನಂ.51 | ಹಾಜರು |
| 8 | ಶ್ರೀ.ಲಕ್ಷ್ಮಣ, ಮಾರ್ಷಲ್ | ಹಾಜರು |
| 9 | ಶ್ರೀ.ಶಿವರಾಮನ್, ಬಿ.ಡಿ.ಎ ಲೇಔಟ್ | ಹಾಜರು |
| 10 | ಶ್ರೀಮತಿ.ಮೋನಿಕಾ ಮಾಲಿನಿ ಮನ್ನತ್ (ಎನ್.ಆರ್.ಕಾಲೋನಿ) | ಹಾಜರು |
| 11 | ಶ್ರೀ.ಜಾಕೀರ್, ಅಂಬೇಡ್ಕರ್‌ನಗರ | ಹಾಜರು |
| 12 | ಶ್ರೀ.ರಾಮಚಂದ್ರ, ಅಂಬೇಡ್ಕರ್‌ನಗರ | ಹಾಜರು |
| 13 | ಶ್ರೀ.ಬಿ.ಕೆ.ಅಶ್ವಥ ನಾರಾಯಣ (ವಿ.ಐ) ಕೆ.ಆರ್.ಪುರ | ಹಾಜರು |
| 14 | ಶ್ರೀ.ರೂಬನ್ ಹ್ಯಾರಿ, ವಿಜಿನಾಪುರ | ಹಾಜರು |
| 15 | ಶ್ರೀ.ಬಷೀರ್ ಅಹಮದ್, ಬಿ.ಡಿ.ಎ. ಲೇಔಟ್ | ಹಾಜರು |

ದಿನಾಂಕ:07.01.2022 ರಂದು ಪೂರ್ವಾಹ್ನ: 11.30 ಗಂಟೆ ಸಮಯದಲ್ಲಿ ಸಭೆಯನ್ನು ಪ್ರಾರಂಭಿಸಲಾಯಿತು. ಮೊದಲನೆಯನದಾಗಿ ಶ್ರೀಮತಿ.ತ್ರಿವೇಣಿ ಅಧ್ಯಕ್ಷರು ರವರು ಸಭೆಯಲ್ಲಿ ಹಾಜರಿರುವ ಸದಸ್ಯರುಗಳು ಮತ್ತು ಅಧಿಕಾರಿ ವೃಂಧದವರಿಗೆಲ್ಲಾ ಸ್ವಾಗತಕೋರಿದರು. ತದನಂತರ ಈ ಕೆಳಕಂಡ ವಿಷಯಗಳ ಬಗ್ಗೆ ಈ ಸಭೆಯಲ್ಲಿ ಚರ್ಚಿಸಲಾಯಿತು.

1. ಶ್ರೀ.ಶಿವರಾಮನ್ ರವರು ಮಾತನಾಡಿ ಬಿಡಿಎ ಲೇಔಟ್ ರಸ್ತೆಗಳಲ್ಲಿ ಬೀದಿ ದೀಪಗಳು ಹಾಳಾಗಿರುವುದರಿಂದ ಸಂಜೆ ವೇಳೆ ಸಾರ್ವಜನಿಕರಿಗೆ ಓಡಾಡಲು ಮತ್ತು ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದರಿಂದ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ಕೋರಿದರು.

**ಕ್ರಮ:–** ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ಅಧಿಕಾರಿಗಳಿಗೆ ರವರಿಗೆ ಇದರ ಬಗ್ಗೆ ಅಗತ್ಯ ಕ್ರಮವಹಿಸಲು ಸಭೆಯಲ್ಲಿ ತಿಳಿಸಿದರು.

ಮು.ತಿ.ನೋ

2. ಶ್ರೀ.ಬಷೀರ್ ಅಹಮದ್ ರವರು ಮಾತನಾಡಿ ಬಿಡಿಎ ಲೇಔಟ್ ಪಾರ್ಕ್ ಸುತ್ತಮುತ್ತ ಪಾಲಿಕೆಯ ಕಸದ ವಾಹನವನ್ನು ನಿಲ್ಲಿಸುತ್ತಿರುತ್ತಾರೆ. ಇದರಿಂದ ಪಾರ್ಕಿಗೆ ಬರುವ ಸಾರ್ವಜನಿಕರಿಗೆ ಮಕ್ಕಳಿಗೆ, ವಯಸ್ಕರಿಗೆ, ಕಸದ ದುರ್ವಾಸನೆಯಿಂದ ಸಾಂಕ್ರಮಿಕ ರೋಗಗಳು ಹರಡುವ ಸಾಧ್ಯತೆ ಇರುವುದರಿಂದ, ಕಸದ ವಾಹನವನ್ನು ಬೇರೆಕಡೆ ನಿಲ್ಲಿಸಬೇಕೆಂದು ಇದರ ಬಗ್ಗೆ ಕ್ರಮ ವಹಿಸಲು ಮತ್ತು ಬಿಡಿಎ ಲೇಔಟ್ ಮಸೀದಿ ಮುಂದೆ ಎಸ್.ಡಬ್ಲ್ಯೂ.ಡಿ ರವರು ಕಲ್ವರ್ಟ್ ಮಾಡಲಾಗಿದ್ದು, ಅದರ ತ್ಯಾಜ್ಯ, ಡೆಬ್ರಿಸ್‌ನ್ನು ತೆರವುಗೊಳಿಸದೆ ಇರುವುದರಿಂದ ಸಾರ್ವಜನಿಕರಿಗೆ ಓಡಾಡಲು ಮತ್ತು ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದರಿಂದ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ಕೋರಿದರು.

**ಕ್ರಮ:–** ಸಂಬಂಧಪಟ್ಟ ಆರೋಗ್ಯ ಅಧಿಕಾರಿಗಳಿಗೆ ಮತ್ತು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಎಸ್.ಡಬ್ಲ್ಯೂ.ಡಿ ಅಧಿಕಾರಿಗಳಿಗೆ ಇದರ ಬಗ್ಗೆ ಅಗತ್ಯ ಕ್ರಮವಹಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

3. ಶ್ರೀ.ರಾಮಚಂದ್ರ ರವರು ಮಾತನಾಡುತ್ತಾ, ಬಿಡಿ.ಎ ಲೇಔಟ್ ಆರ್.ಟಿ.ಓ ಹಿಂಭಾಗ ರಸ್ತೆಯಲ್ಲಿ ವಿದ್ಯುತ್ ಕಂಬಗಳು ರಸ್ತೆಯ ಮಧ್ಯಭಾಗದಲ್ಲಿರುತ್ತದೆ. ಇದರಿಂದ ಸಾರ್ವಜನಿಕರಿಗೆ ಓಡಾಡಲು ಮತ್ತು ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದರಿಂದ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಸಭೆಯಲ್ಲಿ ಕೋರಿದರು.

**ಕ್ರಮ:–** ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೆಸ್ಕಾಂ) ಅಧಿಕಾರಿಗಳಿಗೆ ರವರಿಗೆ ಇದರ ಬಗ್ಗೆ ಅಗತ್ಯ ಕ್ರಮವಹಿಸಲು ಸಭೆಯಲ್ಲಿ ತಿಳಿಸಿದರು.

4. ಶ್ರೀರೂಬೆನ್ ಹ್ಯಾರಿ ರವರು ಮಾತನಾಡಿ ಆರ್.ಆರ್.ಲೇಔಟ್ ನಲ್ಲಿ ಟ್ರಾನ್ಸ್‌ಪಾರಂ ಹತ್ತಿರ ಸಾರ್ವಜನಿಕರು ಕಸ ಹಾಗೂ ಡೆಬ್ರಿಸ್‌ನ್ನು ಬಿಸಾಡಿ ಬ್ಲಾಕ್ ಸ್ಪಾಟ್ ಮಾಡಿಕೊಂಡಿರುತ್ತಾರೆ.ಇದನ್ನು ತೆರವು ಗೊಳಿಸಬೇಕೆಂದು ಸಭೆಯಲ್ಲಿ ಕೋರಿರುತ್ತಾರೆ.

**ಕ್ರಮ:–** ಸಂಬಂಧಪಟ್ಟ ಆರೋಗ್ಯ ಅಧಿಕಾರಿಗಳಿಗೆ ಇದರ ಬಗ್ಗೆ ಅಗತ್ಯ ಕ್ರಮವಹಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಕಾರ್ಯದರ್ಶಿ ರವರು ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯ ಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

Kanagalla Malle

**ವಾರ್ಡ್ ಸಮಿತಿ ಕಾರ್ಯದರ್ಶಿಗಳು,**
**ವಾರ್ಡ್ ನಂ.51, ವಿಜಿನಾಪುರ**